ಕರಕೊಂಡು ಹೋದರು. ಅಲ್ಲಿ ತನ್ನ ಕುತ್ತಿಗೆಯಲ್ಲಿದ್ದ ಬಂಗಾರದ ಸರ ಮತ್ತು ರುದ್ರಾಕ್ಷಿಯ ಸರ ತೋರಿಸಿದರು. 'ನೋಡು ಈ ಬಂಗಾರದ ಸರ. ಇದು ನಾನು ಚಿಕ್ಕವಳಿದ್ದಾಗ ನಮ್ಮ ತಂದೆ ಅವರ ತಾಯಿಯದು ಎಂದು ನನಗೆ ಕೊಟ್ಟಿದ್ದರು. ಅದಕ್ಕೆ ಬರೀ ಖಾಲಿ ಪದಕ ಇತ್ತು. ಅದರಲ್ಲಿ ನನ್ನ ಹೆಸರು ಕೆತ್ತಿಸಿ ಕೊಟ್ಟಿದ್ದರು. ನೋಡು' ಅಂದರು. ಅದು ಐವತ್ತು ಗ್ರಾಂ ನ ಎದೆ ಉದ್ದದ ಸರ. ಅದರಲ್ಲಿ ಅರಳಿ ಎಲೆ ಆಕಾರದ ಲಾಕೆಟ್. ಅದರ ಮೇಲೆ 'ಶೇಷಮ್' ಅಂತ ಬರೆದಿತ್ತು. 'ಈ ರುದ್ರಾಕ್ಷೀ?...' ನಾನು ಕೇಳಿದೆ.

'ಇದಾ...' ನಕ್ಕರು. ನನಗೆ ಮದುವೆ ಆಯಿತಲ್ಲ... ಆಗ ಎಂಟು ವರುಷ ನನಗೆ. ದೊಡ್ಡೋಳಾಗಿಲ್ಲ ಅಂತ ಅಪ್ಪನ ಮನೇಲೇ ಇದ್ದೆ. ಒಂದು ದಿನ ಅಪ್ಪ 'ನಿನ್ನ ಗಂಡ ಮತ್ತೊಬ್ಬಳನ್ನ ಇಟ್ಟುಕೊಂಡಿದ್ದಾನಂತೆ ಪುಟ್ಟೀ' ಅಂತ ಬಹಳ ದುಃಖಿಸಿಬಿಟ್ಟರು. ನಂತರ ಹೇಳಿದರು, 'ಪುಟ್ಟಾ... ನಿನ್ನನ್ನ ಹುಡುಗನ ತರಹ ಬೆಳೆಸ್ತೀನಿ ನೋಡು' ಅಂತ. ಹಾಗೆ ಹೇಳಿದ ಎರಡೇ ವರ್ಷಗಳಲ್ಲಿ ಅವರೇ ಇಲ್ಲವಾದರು. ಇನ್ನು ನನ್ನ ಗಂಡ ಅನ್ನಿಸಿಕೊಂಡವನ ಮುಖವೇ ನನಗೆ ಗೊತ್ತಿಲ್ಲ. ಅವನೂ ಏನೋ ರೋಗ ಬಂದು ಹೋಗಿಬಿಟ್ಟನಂತೆ. ಆಗೆಲ್ಲ ನನಗೆ ಕೇವಲ ಹದಿಮೂರು ವರ್ಷ ಅಷ್ಟೆ. ಈ ರುದ್ರಾಕ್ಷಿ ಇದೆಯಲ್ಲ, ಇದನ್ನ ನಮ್ಮ ಮನೆಗೆ ಒಬ್ಬ ಫಕೀರ ಯಾವಾಗಲಾದರೋ ಒಮ್ಮೆ ಬರುತ್ತಿದ್ದ. ಮುಸಲ್ಮಾನ ಅಂತ ಅವನನ್ನ ಯಾರೂ ಒಳಗೆ ಬಿಟ್ಟುಕೊಳ್ಳುತ್ತಿರಲಿಲ್ಲ. ಸ್ವಲ್ಪ ಅಕ್ಕಿ, ತೆಂಗಿನಕಾಯಿ, ಬೆಲ್ಲ ಕೊಟ್ಟು ಕಳಿಸುತ್ತಿದ್ದರು. ಒಂದು ದಿನ ಆಟ ಆಡುತ್ತಿದ್ದಾಗ ಅವನು ಇದನ್ನು ನನಗೆ ಕೊಟ್ಟ. 'ಬೇಟಿ ಇದಕ್ಕೆ ಬಹಳ ಕೆಲಸ ಇದೆ. ನಿನ್ನ ಹತ್ತಿರ ಇಟ್ಟುಕೊ' ಅಂತ. ಅದನ್ನೇ ಕುತ್ತಿಗೆಗೆ ಈ ಕರೀದಾರದ ಜೊತೆ ಸೇರಿಸಿ ಕಟ್ಟಿಕೊಂಡೆ' ಅಂದರು. ನಾನು ಅದೆರಡನ್ನೂ ನೋಡಿದೆ. ಅವರ ತಂದೆ ಕೊಟ್ಟಿದ್ದು ಅರಳೀ ಎಲೆ ಇರುವ ಬಂಗಾರದ ಸರ, ಫಕೀರ ಕೊಟ್ಟಿದ್ದು ಕರೀದಾರದಲ್ಲಿರುವ ರುದ್ರಾಕ್ಷಿ... ಅಜ್ಜಿ ಎರಡನ್ನೂ ಕುತ್ತಿಗೆಯಿಂದ ತೆಗೆಯುತ್ತಲೇ ಇರಲಿಲ್ಲ. ಅಜ್ಜಿ ಹೇಳಿದರು, 'ಜೀವನ ಅಂದ್ರೆ ಇದೇ ಕಣೆ... ಒಂದು ಸಲ ಬೇಡವೇ ಬೇಡ ಅಂತ ರುದ್ರಾಕ್ಷಿ ಕರೆದು ಬಿಡುತ್ತೆ... ಆಗ ಈ ಅರಳೀ ಎಲೆ ಶೇಷಮ್ಮ ಅಳುತ್ತೆ... ಅದರ ಹತ್ತಿರ ಹೋದರೆ ಬಂಗಾರ ಕರೀತು ಅಂತ ಹೋಗ್ತೀಯ ಅಂತ ರುದ್ರಾಕ್ಷಿ ನಗುತ್ತೆ. ಮತ್ತೆ ಹೇಳುತ್ತೆ... ನಂಗೊತ್ತು ನೀನು ನನ್ನ ಹತ್ತಿರಾನೇ ಬರೋದು ಅಂತ. ಜೋಯಿಸರು ಹೇಳುವುದಿಲ್ಲವೇ ಜೀವನ ಅಂದ್ರೆ ತೂಗುಯ್ಯಾಲೆ ಅಂತ. ಹಾಗೆ ಒಂದು ಸಲ ಅದು, ಒಂದು ಸಲ ಇದು...'

ನನ್ನ ಮನಸ್ಸಿನಲ್ಲಿ ಬಹುಶಃ ಆಗಿನಿಂದಲೇ ಅನ್ನಿಸುತ್ತೆ ಒಂದು ಉನ್ನತ ರೀತಿಯ ಸಂಸ್ಕೃತಿ, ಸಂಸ್ಕಾರ ಮತ್ತು ನಾಗರಿಕತೆಯ ವಿಶಾಲವಾದ ಚಿಂತನೆಗಳು ಪ್ರಾರಂಭವಾಗಿದ್ದು ಅಂತ. ಆಗಿನಿಂದ ನಾನು ಶೇಷಜ್ಜಿಗೆ ಬಲವಾಗಿ ಅಂಟಿಕೊಂಡು ಬಿಟ್ಟೆ. ಆ ಫಕೀರನ ರುದ್ರಾಕ್ಷಿ ಮತ್ತು ಅಜ್ಜಿಯ ತಂದೆ ನೀಡಿದ ಬಂಗಾರದ ಸರ, ಅರಳೀಎಲೆ... ಅದರ ಮೇಲಿನ ಶೇಷಮ್ಮ ಎಲ್ಲವೂ ನನ್ನಲ್ಲಿ ಬೇರೆ ಬೇರೆ ರೀತಿಯ ಆಲೋಚನೆಗಳನ್ನು ಬೆಳೆಸತೊಡಗಿದವು. ಆದರೆ ಅಮ್ಮ ಮಾತ್ರ ಅತ್ತಿಗೆಯನ್ನು ಶತ್ರುವಿನಂತೆ ನೋಡಲು ಪ್ರಾರಂಭಿಸಿಬಿಟ್ಟಳು. ಬಂದ ಬಂದವರ ಜೊತೆಯಲ್ಲೆಲ್ಲ ತನ್ನ ದುಃಖವನ್ನು ತೋಡಿಕೊಳ್ಳುವುದು, ತನಗೆ ತನ್ನ ಮನೆಯಲ್ಲಿ ಬೆಲೆಯೇ ಇಲ್ಲ ಎಂಬಂತೆ ಬಿಂಬಿಸುತ್ತಾ ಅಳುವುದು, ಮತ್ತು ಇದನ್ನು ಬಿಟ್ಟರೆ ತನಗೆ ಬೇರೆ ಏನೂ ಕೆಲಸವೇ ಇಲ್ಲ ಎಂಬಂತೆ ವರ್ತಿಸತೊಡಗಿದಳು. ನನಗೆ ಎಲ್ಲವೂ ತಿಳಿಯುತ್ತಿತ್ತು. ನನ್ನ ವಿಚಾರಧಾರೆಗಳು ಬದಲಾಗತೊಡಗಿದ್ದವು. ನನ್ನೊಳಗೆ ಒಬ್ಬ ಲೇಖಕಿ, ಕವಯಿತ್ರಿ ಹುಟ್ಟಿಕೊಳ್ಳತೊಡಗಿದ್ದರು. ನಾನು ಶೇಷಜ್ಜಿಯನ್ನು ಅಂಟಿಕೊಂಡಿದ್ದು ಅಮ್ಮನಿಗೆ ಸರಿಕಾಣಲಿಲ್ಲ. 'ಸುಮಂಗಲೆ ಅಲ್ಲ... ಏನೂ ಅಲ್ಲ.